# ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

[ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ]

ದೂರವಾಣಿ: 0821-2340292
Email: aeeeeserkn@gmail.com

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ.
ಮೈಸೂರು

ಸಂಖ್ಯೆ:-ಸಕಾನಿಇಂ/ಸ.ಇಂ/ಆರ್‌ಕೆನ/ಉವಿ/ಎಫ್ /2017-18/ 542-43 ದಿನಾಂಕ:- 26/09/17.

## ಸಭಾ ನಡಾವಳಿ

ರಾಮಕೃಷ್ಣ ನಗರ ಉಪ ವಿಭಾಗದಲ್ಲಿ, ಶ್ರೀಯುತ ನರಸಿಂಹೇಗೌಡ, ಅಧೀಕ್ಷಕ ಇಂಜಿನೀಯರ್(ವಿ), ಕಾ ಮತ್ತು ಪಾ ಮೈಸೂರು ವೃತ್ತ, ಚಾವಿಸನಿನಿ, ಮೈಸೂರು ರವರ ಅಧ್ಯಕ್ಷತೆಯಲ್ಲಿ ದಿನಾಂಕ: 21.08.2017 ರಂದು ಬೆಳಗ್ಗೆ 11:00 ಗಂಟೆಗೆ ಜನ ಸಂಪರ್ಕ ಸಭೆಯಲ್ಲಿ ಗ್ರಾಹಕರ ವಿದ್ಯುತ್ ಸಂಬಂಧಿತ ದೂರುಗಳು/ಕುಂದು ಕೊರತೆಗಳ ಕುರಿತು ನಡೆದ ಸಭಾ ನಡಾವಳಿ.

ಹಾಜರಿದ್ದ ಅಧಿಕಾರಿ/ನೌಕರರು:-

1. ಶ್ರೀಮತಿ ಅನಿತ.ಎಸ್.ಬಿ, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ರಾಮಕೃಷ್ಣನಗರ ಉಪ ವಿಭಾಗ.
2. ಶ್ರೀಮತಿ ದಿವ್ಯ.ಸಿ.ಎನ್, ಸಹಾಯಕ ಇಂಜಿನಿಯರ್(ವಿ),ರಾಮಕೃಷ್ಣನಗರ ಉಪ ವಿಭಾಗ.
3. ಶ್ರೀಯುತ ಮುಹೀದ್ ಅಹಮದ್, ಸಹಾಯಕ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
4. ಶ್ರೀಯುತ ಸುರೇಶ್, ಸಹಾಯಕ ಇಂಜಿನಿಯರ್(ವಿ), ಜಯಪುರ ಶಾಖೆ.
5. ಶ್ರೀಯುತ ಗುರುಸ್ವಾಮಿ, ಕಿರಿಯ ಇಂಜಿನಿಯರ್(ವಿ), ವಿವೇಕಾನಂದ ಶಾಖೆ.
6. ಶ್ರೀಯುತ ತಿಮ್ಮರಾಜು, ಕಿರಿಯ ಇಂಜಿನಿಯರ್(ವಿ), ಹಾರೋಹಳ್ಳಿ ಶಾಖೆ.

ಹಾಜರಿದ್ದ ಗ್ರಾಹಕರು:-

1. ಶ್ರೀ ಮಲ್ಲಸ್ವಾಮಿ, ಯಡಹಳ್ಳಿ,
2. ಶ್ರೀ ಅಶ್ವಥನಾರಾಯಣ, ಸಲಹೆಗಾರರು, ಮೈಸೂರು.
3. ಶ್ರೀ ಡಾ//ಜೆ.ಜೆ.ವಿಶ್ವನಾಥಯ್ಯ ರಾಮಕೃಷ್ಣನಗರ.
4. ಶ್ರೀ ಕೆ.ಸಿ.ಚಿಕ್ಕಣ್ಣ.
5. ಶ್ರೀ ಎಸ್.ಕೇಶವಮೂರ್ತಿ
6. ಶ್ರೀ ಪಿ.ಸಿದ್ಧರಾಜು ಮಾರ್ಬಳ್ಳಿ.
7. ಶ್ರೀ ಉದಯ ಕುಮಾರ್
8. ಶ್ರೀ ಸುನಿಲ್ ಕುಮಾರ್
9. ಶ್ರೀ ಶ್ರೀನಿವಾಸ ಮೂರ್ತಿ ನಿಮಿಷಾಂಭ ಲೇಔಟ್.
10. ಶ್ರೀ ರೂಪೇಶ್ ಶ್ರೀರಾಂಪುರ.
11. ಶ್ರೀ ಪಾಪಣ್ಣ ಕೋಟೆಹುಂಡಿ.
12. ಶ್ರೀ ರಂಗಸ್ವಾಮಿ ಕೋಟೆಹುಂಡಿ.
13. ಶ್ರೀ ಮುರಳಿ ಅನಗಹಳ್ಳಿ
14. ಶ್ರೀ ನಾಗಭೂಷಣ ಆರಾಧ್ಯ.
15. ಶ್ರೀ ಮಲ್ಲೇಶ ಎಂ.
16. ಶ್ರೀ ಕೆಂಪ ಸಿದ್ದಯ್ಯ
17. ಶ್ರೀ ಸಿದ್ದಯ್ಯ
18. ಶ್ರೀ ಬಸವಣ್ಣ ಮದ್ದೂರುಹುಂಡಿ

ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಅನುಪಾಲನಾ ವರದಿಯನ್ನು ಓದಿ ಗ್ರಾಹಕರ ಕುಂದು ಕೊರತೆಗಳನ್ನು ಈಗಾಗಲೇ ಬಗೆಹರಿಸಿರುವುದಾಗಿ ತಿಳಿಸಿದರು.

ಸಭೆಯಲ್ಲಿ ತಿಳಿಸಿದಂತಹ ಅಹವಾಲುಗಳು ಈ ಕೆಳಕಂಡತಿರುತ್ತವೆ.

| ಕ್ರ. ಸಂ | ಅರ್ಜಿದಾರರ ಹೆಸರು, ವಿಳಾಸ ಮತ್ತು ದೂರವಾಣಿ ಸಂಖ್ಯೆ | ವಿಷಯ | ಕ್ರಮ |
|---|---|---|---|
| | ಶ್ರೀ ವಿಶ್ವನಾಥಯ್ಯ.ಜೆ.ಜಿ., ರಾಮಕೃಷ್ಣನಗರ 9448529494 | ಮೊದಲನೆಯದಾಗಿ ಚಾವಿಸನಿನಿ ನಿಗಮ ರವರು ಉತ್ತಮ ರೀತಿಯಲ್ಲಿ ಗ್ರಾಹಕರಿಗೆ ಸೇವೆ ಸಲ್ಲಿಸುತ್ತಿರುವುದಾಗಿ ಅಭಿನಂಧಿಸಿದರು ನಂತರ<br>• ರಾಮಕೃಷ್ಣನಗರ ಉಪ ವಿಭಾಗ ಕಚೇರಿಯು ಖಾಸಗಿ ಕಟ್ಟಡದಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ನಿಗಮದವತಿಯಿಂದ ಸ್ವಂತ ಕಟ್ಟಡವನ್ನು ನಿರ್ಮಿಸಬೇಕೆಂದು ಸೂಚಿಸಿದರು. | • ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಈಗಾಗಲೇ ಯುನಿವರ್ಸಿಟಿ ಬಡಾವಣೆಯಲ್ಲಿ ವಾಣಿಜ್ಯ ಸಂಕೀರ್ಣ ನಿವೇಶನವನ್ನು ಕೋರಿದ್ದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದವತಿಯಿಂದ ಶೀಘ್ರದಲ್ಲಿ ಸ್ವಂತ ಕಟ್ಟಡವನ್ನು ನಿರ್ಮಿಸಲು ಕ್ರಮಕೈಗೊಳ್ಳುವುದಾಗಿ ತಿಳಿಸಿದರು. |
| 2. | ಶ್ರೀ ಅಶ್ವಥ್ ನಾರಾಯಣ 9449833792 | • ಸೆಪ್ಟಂಬರ್‌ನಲ್ಲಿ ಜನ ಸಂಪರ್ಕ ಸಭೆ ನಡೆಯಬೇಕಾಗಿದ್ದು, ಇದನ್ನು ಮುಂಚಿತವಾಗಿ ನಡೆಸುತ್ತಿರುವುದರಿಂದ ಗ್ರಾಹಕರಿಗೆ ಇದರ ಬಗ್ಗೆ ಮಾಹಿತಿ ಸರಿಯಾಗಿ ತಲುಪಿರುವುದಿಲ್ಲ ಎಂದು ತಿಳಿಸಿದರು.<br>• ಕೆಲವೆಡೆ ತಾಂತ್ರಿಕ ಹಾಗೂ ಕಂದಾಯ ಶಾಖೆಯಲ್ಲಿ ಅರ್ಜಿಗಳನ್ನು ನೊಂದಾಯಿಸುವ ಮುಂಚೆಯೇ ಶಾಖಾಧಿಕಾರಿಗಳ ಕ್ಷೇತ್ರ ವರದಿಯನ್ನು ಪಡೆಯುವಂತೆ ತಿಳಿಸುತ್ತಿದ್ದು, ಇದರಿಂದ ಗ್ರಾಹಕರಿಗೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು.<br>• ಸೇವಾ ಕೇಂದ್ರದ ವಾಹನದವರು ಗ್ರಾಹಕರ ದೂರವಾಣಿ ಕರೆಗೆ ಸರಿಯಾಗಿ ಸ್ಪಂದಿಸುತ್ತಿಲ್ಲವೆಂದು ಇದರಿಂದ ಉತ್ತಮ ರೀತಿಯಲ್ಲಿ ವಿದ್ಯುತ್ ಸರಬರಾಜು ನೀಡುತ್ತಿಲ್ಲವೆಂದು ತಿಳಿಸಿದರು.<br>• ತಾತ್ಕಾಲಿಕ ವಿದ್ಯುತ್ ಸರಬರಾಜು ನೀಡಿರುವ ಸ್ಥಾವರಗಳಿಗೆ ಸಹಾಯಕ ಇಂಜಿನಿಯರ್(ವಿ) ರವರು ಮಾಹೆಯಾನ ಬಿಲ್ ಮಾಡುವ ಮೊದಲು ಸ್ಥಳ ಪರಿಶೀಲಿಸಿ ಅಂತಹ ಸ್ಥಾವರಗಳಿಗೆ ಸಂಪರ್ಕಿತ ಭಾರವನ್ನು ಕಂಡುಕೊಂಡು | • ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಕಾರಣಾಂತರದಿಂದ ಸಭೆಯನ್ನು ಮುಂಚಿತವಾಗಿಯೇ ನಡೆಸಿದ್ದು, ಇದರ ಬಗ್ಗೆ ಗ್ರಾಹಕರಿಗೆ ತಿಳಿಸುವ ಸಲುವಾಗಿ ಮುಂಚಿತವಾಗಿಯೇ ದಿನಪತ್ರಿಕೆಯಲ್ಲಿ ಹಾಗೂ ಕರಪತ್ರ ಮಾಡಿ ವಿಷಯ ತಿಳಿಯುವಂತೆ ಮಾಡಲಾಗಿತ್ತು ಎಂದು ತಿಳಿಸಿದರು.<br>• ಕೆಲವು ಗುತ್ತಿಗೆದಾರರು ಮುಂಚಿತವಾಗಿಯೇ ಅರ್ಜಿಗಳನ್ನು ನೊಂದಾಯಿಸಿ ನಂತರ ವಿದ್ಯುತ್ ಸಂಪರ್ಕವನ್ನು ಬೇಡವೆಂದು ತಿರಸ್ಕರಿಸಿರುತ್ತಾರೆ. ಅಂತಹ ಸಂದರ್ಭದಲ್ಲಿ ಇನ್ಫೋಸಿಸ್ ತಂತ್ರಾಂಶದಲ್ಲಿ ಅರ್ಜಿಗಳು ಬಾಕಿಯಾಗಿದ್ದು, ಇದನ್ನು ತೊಡೆದು ಹಾಕಲು ಕಷ್ಟವಾಗುವುದರಿಂದ ಮೊದಲೇ ಸ್ಥಳ ಪರಿಶೀಲಿಸಿ ಅರ್ಜಿಗಳ ಸತ್ಯಾಸತ್ಯಯೆಯನ್ನು ಪರೀಕ್ಷಿಸಿ ನಂತರ ಅರ್ಜಿ ನೊಂದಾಯಿಸುತ್ತಿರುವುದಾಗಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ತಿಳಿಸಿದರು. ಇದಕ್ಕೆ ಇನ್ನು ಮುಂದೆ ಮೊದಲು ಅರ್ಜಿಯನ್ನು ನೊಂದಾಯಿಸಿ ನಂತರ ಕ್ಷೇತ್ರ ವರದಿಗೆ ಕಳುಹಿಸುವಂತೆ ಸಹಾಯಕ ಅಧೀಕ್ಷಕ |

| | | | |
|---|---|---|---|
| | | ನಂತರ ವಿದ್ಯುತ್ ಬಿಲ್ಲನ್ನು ನೀಡಬೇಕೆಂದು ತಿಳಿಸಿದರು. | ಇಂಜಿನಿಯರ್(ವಿ) ರವರು ಸೂಚಿಸಿದರು.<br>• ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸೇವಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವವರಿಗೆ ರಾತ್ರಿಯ ವೇಳೆ ಯಾವುದೇ ತುರ್ತು ಕೆಲಸ ಬಂದರೆ ಅದನ್ನು ಶೀಘ್ರವಾಗಿ ಬಗೆಹರಿಸುವಂತೆ ತಿಳಿಸಲು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>• ಸಹಾಯಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲಿಸುತ್ತಿರುವುದಲ್ಲದೇ ಮಾಪಕದ ರೀಡಿಂಗ್‌ನ್ನು ತರುವ ವೇಳೆ ಬಿ.ಎಂ.ಡಿ ನ್ನು ಸಹ ತೆಗೆದುಕೊಳ್ಳುತ್ತಿದ್ದು ಇದರ ಅನುಸಾರ ತಾತ್ಕಾಲಿಕ ಸ್ಥಾವರಗಳಿಗೆ ವಿದ್ಯುತ್ ಬಿಲ್ ನೀಡುತ್ತಿರುವುದಾಗಿ ತಿಳಿಸಿದರು. |
| 3. | ಶ್ರೀ ರೂಪೇಶ್,<br>ಶ್ರೀರಾಂಪುರ<br>9341625483 | • ಸೇವಾ ಕೇಂದ್ರದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಿಬ್ಬಂಧಿಗಳು ಈ ಹಿಂದೆ ರಾತ್ರಿ ವೇಳೆ ಕರ್ತವ್ಯ ನಿರ್ವಹಿಸುತ್ತಿರುವಾಗ  ಕಾರಿನಲ್ಲಿ ವೇಗವಾಗಿ ಬಂದು ಸಿಬ್ಬಂಧಿಯವರಿಗೆ ಅಪಘಾತವಾಗುವುದು ಸದ್ಯದಲ್ಲಿ ತಪ್ಪಿದ್ದು, ಆದ್ದರಿಂದ ನಿಗಮದ ಸಿಬ್ಬಂಧಿಗಳಿಗೆ ಸುರಕ್ಷತಾ ಕ್ರಮವಾಗಿ ರೇಡಿಯಂ ಇರುವಂತಹ ವಸ್ತ್ರಗಳನ್ನು ನೀಡಬೇಕೆಂದು ತಿಳಿಸಿದರು. | • ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಇದರ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. |
| 4. | ಶ್ರೀ ಪಿ.ಸಿದ್ದರಾಜು,<br>ಮಾರ್ಬಳ್ಳಿ<br>9945901012 | • ಟಿ.ಕಾಟೂರು ಗ್ರಾಮದಲ್ಲಿ ಕುಡಿಯುವ ನೀರು ಸರಬರಾಜು ಸ್ಥಾವರದ ಮೇಲ್ಭಾಗದಲ್ಲಿ 11 ಕೆ ಎನ್.ಜೆ.ವೈ ಫೀಡರ್ ಹಾದುಹೋಗಿದ್ದು, ಇದರಿಂದ ಮೋಟಾರ್ ಕೆಟ್ಟುಹೋದರೆ ಇದನ್ನು ಕೊಳವೆ ಬಾವಿಯಿಂದ ಮೇಲೆತ್ತಲು ಕಷ್ಟವಾಗಿದ್ದು, ಹಾಲಿ ಇರುವ Over Head Line ನ್ನು AB Cable ನಿಂದ ಬದಲಾಯಿಸುವಂತೆ ಕೋರಿಕೊಂಡರು.<br>• ಚಿಕ್ಕಣ್ಣ ರವರ ಮನೆಯ ಮುಂದೆ ಇರುವ ಪರಿವರ್ತಕವನ್ನು ಸ್ಥಳಾಂತರಿಸಿಕೊಡುವಂತೆ ಕೋರಿದರು.<br>• ಬೀದಿದೀಪ ನಿಯಂತ್ರಣಾ ವೈರನ್ನು ಹಾಕಿಸಿಕೊಡುವಂತೆ ಕೋರಿದರು. | • ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲನೆ ಮಾಡಿ ನಿಗಮದ ನಿಯಾಮಾನುಸಾರ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>• ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಅಂದಾಜು ಪಟ್ಟಿ ತಯಾರಿಸಿ ನಿಗಮದ ನಿಯಮಾನುಸಾರ ಸ್ವಯಂ ನಿರ್ವಾಹಣಾ ಯೋಜನೆಯಡಿಯಲ್ಲಿ ಹಣವನ್ನು ಪಾವತಿಸಿ ಸ್ಥಳಾಂತರಿಸಿಕೊಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>• ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಗ್ರಾಮ ಪಂಚಾಯ್ತಿವತಿಯವರು ಇದಕ್ಕೆ ತಗಲುವ ವೆಚ್ಚವನ್ನು ಭರಿಸಿದರೇ ನಿಗಮದ ನಿಯಮಾನುಸಾರ ಕಂಟ್ರೋಲರ್ ವೈರನ್ನು ಎಳೆಸಿಕೊಡಬಹುದಾಗಿರುತ್ತದೆ ಎಂದು |

| | | | |
|---|---|---|---|
| | | | |
| 5. | ಪಾಪಣ್ಣ, ಕೋಟೆಹುಂಡಿ 9538553752 | • ಕೋಟೆಹುಂಡಿ ಗ್ರಾಮದಲ್ಲಿ ಮಧ್ಯಂತರ ಕಂಬಗಳನ್ನು ಅಳವಡಿಸುವಂತೆ ಕೋರಿದರು.<br>• ಪರಿಶಿಷ್ಟ ಜಾತಿ ರುದ್ರಭೂಮಿಯಲ್ಲಿ ವಿದ್ಯುತ್ ತಂತಿಯು ಹಾದುಹೋಗಿದ್ದು ಇದನ್ನು ಸ್ಥಳಾಂತರಿಸಿಕೊಡುವಂತೆ ಕೋರಿದರು. | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಈಗಾಗಲೇ ಮಧ್ಯಂತರ ಕಂಬಗಳನ್ನು ಅಳವಡಿಸಲು ಕಾರ್ಯದೇಶ ಸಂಖ್ಯೆ ನೀಡಿದ್ದು, ಶೀಘ್ರದಲ್ಲಿಯೇ ಕಾಮಗಾರಿಯನ್ನು ಪೂರ್ಣಗೊಳಿಸುವುದಾಗಿ ತಿಳಿಸಿದರು.<br>• ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಸ್ಥಳ ಪರಿಶೀಲನೆ ಮಾಡಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |
| 6. | ಶ್ರೀ ಶ್ರೀನಿವಾಸ ಮೂರ್ತಿ, ನಿಮಿಷಾಂಭ ಲೇಔಟ್ 9449693625 | • ASD ಮೊತ್ತವನ್ನು ಬಿಲ್ಲಿನ ಕೊನೆಯಲ್ಲಿ ಸಣ್ಣದಾಗಿ ನಮೂದಿಸಿರುವುದರಿಂದ ಅದರ ಬಗ್ಗೆ ಮಾಹಿತಿ ಸಿಗದೇ ASD ಮೊತ್ತವನ್ನು ಪಾವತಿಸಲು ಕಷ್ಟವಾಗಿದ್ದು, ಇದರ ಬಗ್ಗೆ ಗ್ರಾಹಕರಿಗೆ ಮಾಹಿತಿ ನೀಡಲು ಪ್ರತ್ಯೇಕ ಪತ್ರವನ್ನು ನೀಡುವಂತೆ ಕೋರಿದರು.<br>• ತಮ್ಮ ಸ್ಥಾವರದ ಬಿಲ್ಲು ಪ್ರತಿ ಮಾಹೆ ಸುಮಾರು 1200 ರೂಪಾಯಿಗಳು ಬರುತ್ತಿದ್ದು, ಸದರಿ ಮಾಹೆಯಲ್ಲಿ ಹೆಚ್ಚು ಬಿಲ್ ಮೊತ್ತ ಬಂದಿರುವುದಾಗಿ ತಿಳಿಸಿದರು. | • ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಗ್ರಾಹಕರಿಗೆ ASD ಮೊತ್ತದ ಬಗ್ಗೆ ಮಾಹಿತಿ ನೀಡಲು ಪ್ರತ್ಯೇಕ ಪತ್ರವನ್ನು ನೀಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು.<br>• ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಮಾಪಕ ಪರಿಶೀಲನಾ ವೆಚ್ಚವನ್ನು ಪಾವತಿಸಿ ತಮ್ಮ ಸ್ಥಾವರದ ಮಾಪಕದ ನಿಖರತೆಯನ್ನು ತಿಳಿದುಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿದರು. |
| 7. | ಶ್ರೀ ನಾಗಭೂಷಣ ಆರಾಧ್ಯ 9886234399 | • ಕೆಲವು ಕಛೇರಿಯಲ್ಲಿ ಉಪ ಸಂಪರ್ಕ ಪಡೆಯುವಾಗ ಕಡ್ಡಾಯವಾಗಿ ಸಾಮಾನ್ಯ ಮುಖ್ಯ ಕರಾರು ಗಳನ್ನು ತೆಗೆದುಕೊಳ್ಳುತ್ತಿರುವುದಿಲ್ಲವೆಂದು ತಿಳಿಸಿದರು. | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರ ರಾಮಕೃಷ್ಣನಗರ ಉಪ ವಿಭಾಗದ ಕಛೇರಿಯಲ್ಲಿ ತಪ್ಪದೇ ಎಲ್ಲಾ ಉಪ ಸಂಪರ್ಕ ಮೀಟರ್ ಬರುವಂತಹ ಸ್ಥಾವರಗಳಿಗೆ ಸಾಮಾನ್ಯ ಮುಖ್ಯ ಕರಾರು ಪಡೆಯುತ್ತಿರುವುದಾಗಿ ತಿಳಿಸಿದರು. |

| | | | |
|---|---|---|---|
| 8. | ಶ್ರೀ ಮಲ್ಲಿಸ್ವಾಮಿ<br>ಯಡಹಳ್ಳಿ<br>9901635706 | • ಜಯಪುರ ಶಾಖೆಯನ್ನು ಸ್ವಂತ ಕಟ್ಟಡದಲ್ಲಿ ನಿರ್ವಹಿಸುವಂತೆ ಕ್ರಮ ಕೈಗೊಳ್ಳಲು ಕೋರಿದರು. | • ಇದಕ್ಕೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ಜಯಪುರ ಗ್ರಾಮದಲ್ಲಿ ಈಗಾಗಲೇ ಗ್ರಾಮ ಪಂಚಾಯ್ತಿಗೆ ಪತ್ರ ವ್ಯವಹಾರ ನಡೆಸಿ ಸ್ಥಳ ಮಂಜೂರಾತಿಗಾಗಿ ರೆಸುಲ್ಯೂಷನ್ ಆದ ತಕ್ಷಣ ನಿಗಮಕ್ಕೆ ಸಗಥಳ ನಂಜೂರಾತಿ ಮಾಡಲು ತಿಳಿಸಿದರು. |
| 9. | ಬಸವಣ್ಣ ಮದ್ದೂರು<br>ಹುಂಡಿ<br>8747978792 | • ಮನೆ ಹತ್ತಿರವಿರುವ ಟಿ.ಸಿ.ಎಸ್ ಸ್ಟ್ರಕ್ಚರ್‌ನ್ನು ಸ್ಥಳಾಂತರಿಸಿಕೊಡುವಂತೆ ಕೋರಿದರು. | • ಇದಕ್ಕೆ ಅಧೀಕ್ಷಕ ಇಂಜಿನಿಯರ್(ವಿ) ರವರು ಅಂದಾಜು ಪಟ್ಟಿ ತಯಾರಿಸಿ ನಿಗಮದ ನಿಯಮಾನುಸಾರ ಸ್ವಯಂ ನಿರ್ವಾಹಣಾ ಯೋಜನೆಯಡಿಯಲ್ಲಿ ಹಣವನ್ನು ಪಾವತಿಸಿ ಸ್ಥಳಾಂತರಿಸಿಕೊಡುವಂತೆ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರಿಗೆ ಸೂಚಿಸಿದರು. |

ಅಧೀಕ್ಷಕ ಇಂಜಿನಿಯರ್(ವಿ) ರವರು ಸಭೆಯನ್ನು ಉದ್ದೇಶಿಸಿ ಆರ್.ಇ.ಸಿ ವತಿಯಿಂದ ಉರ್ಜಾ ಮಿತ್ರ ಎಂಬ ಹೊಸ ಯೋಜನೆಯನ್ನು ಜಾರಿಗೆ ತಂದಿದ್ದು, ಇದರಿಂದ ಗ್ರಾಹಕರಿಗೆ ವಿದ್ಯುತ್ ವ್ಯತ್ಯಯವಾಗಿರುವುದರ ಬಗ್ಗೆ ಮಾಹಿತಿಯನ್ನು ಮುಂಚಿತವಾಗಿ ಸಂದೇಶದ ಮೂಲಕ ರವಾನಿಸುವುದಲ್ಲದೇ ಗ್ರಾಹಕರು ಹೊಸ ವಿದ್ಯುತ್ ಸಂಪರ್ಕ ಭಾರ ಹೆಚ್ಚುವರಿ ಇನ್ನಿತರೆ ಉಪಯೋಗಗಳನ್ನು ಪಡೆಯಲು ತಾವೇ ಖುದ್ದಾಗಿ ಅರ್ಜಿಯನ್ನು ಆನ್-ಲೈನ್ ಮೂಲಕ ನೊಂದಾಯಿಸಿಕೊಳ್ಳಬಹುದಾಗಿರುತ್ತದೆ ಎಂದು ತಿಳಿಸಿದರು.

ಅಂತಿಮವಾಗಿ ಸಭೆಗೆ ಹಾಜರಿದ್ದ ಎಲ್ಲಾ ಅಧಿಕಾರಿ/ಸದಸ್ಯರುಗಳಿಗೆ ವಂದಿಸುತ್ತಾ ಮಧ್ಯಾಹ್ನ 1:30 ಗಂಟೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ರಾಮಕೃಷ್ಣನಗರ ಉಪ ವಿಭಾಗ, ಚಾ.ವಿ.ಸ.ನಿ.ನಿ.
ಮೈಸೂರು.

ಪ್ರತಿಯನ್ನು:-

1. ಮಾನ್ಯ ಅಧೀಕ್ಷಕ ಇಂಜಿನಿಯರ್(ವಿ), ನಗರ ಕಾಮಗಾರಿ ವೃತ್ತ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.
2. ಮಾನ್ಯ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ವಿ.ವಿ.ಮೊಹಲ್ಲಾ ವಿಭಾಗ, ಚಾವಿಸನಿನಿ, ಮೈಸೂರು ರವರ ದಯಾಪರ ಮಾಹಿತಿಗಾಗಿ.